# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2014-15ನೇ ಶೈಕ್ಷಣಿಕ ಸಾಲಿಗೆ ರಾಜ್ಯದಲ್ಲಿ ಹಾಲಿಯಿರುವ ಕೆಲವು ಖಾಸಗಿ ಮತ್ತು ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಹೊಸ ಕೋರ್ಸು ಪ್ರಾರಂಭಿಸಲು ಹಾಗೂ ಪ್ರವೇಶಾತಿ ಹೆಚ್ಚಳಕ್ಕಾಗಿ ಹಾಗೂ ಹೊಸ ಪಾಲಿಟೆಕ್ನಿಕ್ ಸಂಸ್ಥೆಯನ್ನು ಪ್ರಾರಂಭಿಸಲು ರಾಜ್ಯ ಸರ್ಕಾರದ ಮಂಜೂರಾತಿಯನ್ನು ನೀಡುವ ಬಗ್ಗೆ.

**ಓದಲಾಗಿದೆ:**

ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಇವರ ಪತ್ರ ಸಂಖ್ಯೆ: ಡಿಟಿಇ 04 ಡಿವಿಪಿ(2) 2014, ದಿನಾಂಕ: 13.05.2014.

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಇವರು ರಾಜ್ಯದಲ್ಲಿರುವ ವಿವಿಧ ಖಾಸಗಿ ಹಾಗೂ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕೆಲವೊಂದು ಹೊಸ ಕೋರ್ಸುಗಳನ್ನು ಪ್ರಾರಂಭಿಸಲು, ಈಗಾಗಲೇ ಇರುವ ಕೋರ್ಸುಗಳಿಗೆ ವಿದ್ಯಾರ್ಥಿ ಪ್ರಮಾಣವನ್ನು ಹೆಚ್ಚಿಸಲು ಹಾಗೂ ಒಂದು ಹೊಸ ಪಾಲಿಟೆಕ್ನಿಕ್ ಸಂಸ್ಥೆಯನ್ನು ಪ್ರಾರಂಭಿಸಲು ಎಐಸಿಟಿಇ ಯು 2014-15ನೇ ಸಾಲಿಗೆ ಮಾನ್ಯತೆ ನೀಡಿರುವುದರಿಂದ ಸದರಿ ಪ್ರಸ್ತಾವನೆಗೆ ರಾಜ್ಯ ಸರ್ಕಾರದ ಅನುಮೋದನೆಯು ಅಗತ್ಯವಾಗಿರುವುದರಿಂದ ಈ ಬಗ್ಗೆ ಸೂಕ್ತ ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶಸಂಖ್ಯೆ: ಇಡಿ 144 ಟಿಪಿಇ 2014**
**ಬೆಂಗಳೂರು, ದಿನಾಂಕ: 30ನೇ ಜೂನ್ 2014.**

ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು, ಅನುಬಂಧದಲ್ಲಿ ತಿಳಿಸಲಾಗಿರುವ ವಿವಿಧ ಖಾಸಗಿ ಹಾಗೂ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕೆಲವೊಂದು ಹೊಸ ಕೋರ್ಸುಗಳನ್ನು ಪ್ರಾರಂಭಿಸಲು, ಈಗಾಗಲೇ ಇರುವ ಕೋರ್ಸುಗಳಿಗೆ ವಿದ್ಯಾರ್ಥಿ ಪ್ರಮಾಣವನ್ನು ಹೆಚ್ಚಿಸಲು ಹಾಗೂ ಒಂದು ಹೊಸ ಪಾಲಿಟೆಕ್ನಿಕ್ ಸಂಸ್ಥೆಯನ್ನು ಪ್ರಾರಂಭಿಸಲು ಎಐಸಿಟಿಇ ಯು 2014-15ನೇ ಸಾಲಿಗೆ ಎ.ಐ.ಸಿ.ಟಿ.ಇ. ಯು ವಿವಿಧ ದಿನಾಂಕಗಳಲ್ಲಿ ಮಂಜೂರಾತಿ ನೀಡಿರುವ ಪತ್ರದಲ್ಲಿನ ಷರತ್ತುಗಳನ್ನು ಪೂರ್ಣವಾಗಿ ಪೂರೈಸುವ ಷರತ್ತಿಗೊಳಪಡಿಸಿ, 2014-15ನೇ ಶೈಕ್ಷಣಿಕ ಸಾಲಿಗೆ ಅನುಬಂಧದಲ್ಲಿ ತಿಳಿಸಲಾಗಿರುವ ಕೋರ್ಸುಗಳನ್ನು ನಿಗದಿತ ವಿದ್ಯಾರ್ಥಿ ಪ್ರಮಾಣಗಳೊಂದಿಗೆ ಪ್ರಾರಂಭಿಸಲು/ಮುಂದುವರೆಸಲು ಹಾಗೂ ಹೊಸ ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಯನ್ನು ಪ್ರಾರಂಭಿಸಲು ಸರ್ಕಾರವು ಈ ಕೆಳಕಂಡ ಷರತ್ತುಗಳೊಂದಿಗೆ ಮಂಜೂರಾತಿ ಹಾಗೂ ಅನುಮೋದನೆಯನ್ನು ನೀಡಿದೆ.

**ಷರತ್ತುಗಳು:**

1) ಪಾಲಿಟೆಕ್ನಿಕ್‌ಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಪಾಲಿಟೆಕ್ನಿಕ್‌ನ ಮೇಲ್ಕಂಡ ಕೋರ್ಸುಗಳಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದನ್ನು ಶಾಶ್ವತ ಅನುದಾನರಹಿತ ಕೋರ್ಸೆಂದು ಪರಿಗಣಿಸತಕ್ಕದ್ದು;
2) ಮೇಲ್ಕಂಡ ಪಾಲಿಟೆಕ್ನಿಕ್, ತಾಂತ್ರಿಕ ಶಿಕ್ಷಣ ಇಲಾಖೆ / ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು;
3) ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ;
4) ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ / ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
5) ಎಐಸಿಟಿಇ ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

6) ತಾಂತ್ರಿಕ ಶಿಕ್ಷಣ ಇಲಾಖೆಯು ನಿಗದಿಪಡಿಸುವ ಶುಲ್ಕವನ್ನು ಮಾತ್ರ ವಸೂಲು ಮಾಡತಕ್ಕದ್ದು. ತಾಂತ್ರಿಕ ಶಿಕ್ಷಣ ಇಲಾಖೆಯು ನಿಗದಿಪಡಿಸಿದ ಶುಲ್ಕ / ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ.

7) ದಿನಾಂಕ: 13-8-1997ರಂದು ವಿಶಾಖ ೩/ ರಾಜಸ್ಥಾನ ಸರ್ಕಾರ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟು ನೀಡಿರುವ ತೀರ್ಪಿನನುಸಾರ ಯಾವುದೇ ಬೋಧಕ / ಬೋಧಕೇತರ / ವ್ಯಕ್ತಿ / ವಿದ್ಯಾರ್ಥಿಯು ಗಲಭೆಯನ್ನು ಉಂಟು ಮಾಡುವುದಾಗಲೀ / ಅಥವಾ ಕಾಲೇಜಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದಲ್ಲಿ ಅದು ಸಂಜ್ಞೆಯ ಅಪರಾಧ (Cognizable Offence) ಎಂದು ಪರಿಗಣಿಸಿ, ಈ ತರಹದ ಚಟುವಟಿಕೆಗಳಲ್ಲಿ ತೊಡಗಿದ ಬೋಧಕ / ಬೋಧಕೇತರ / ವ್ಯಕ್ತಿ / ವಿದ್ಯಾರ್ಥಿಯ ಪ್ರವೇಶವನ್ನು ರದ್ದುಪಡಿಸುವುದು; ಮತ್ತು ಸಂಬಂಧಪಟ್ಟ ಬೋಧಕ / ಬೋಧಕೇತರ / ವ್ಯಕ್ತಿ / ವಿದ್ಯಾರ್ಥಿಯ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸತಕ್ಕದ್ದು; ಮುಂದುವರೆದು, ಪಾಲಿಟೆಕ್ನಿಕ್ / ಆಡಳಿತ ಮಂಡಳಿಯು ಸುಪ್ರೀಂಕೋರ್ಟಿನ ಆದೇಶದನ್ವಯ ಒಂದು ದೂರು ಸಮಿತಿಯನ್ನು ರಚಿಸಿ ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು;

8) ಪಾಲಿಟೆಕ್ನಿಕ್ ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಉತ್ತಮ ಕೋರ್ಸನ್ನು ನಡೆಸತಕ್ಕದ್ದು; ಪಾಲಿಟೆಕ್ನಿಕ್‌ನ ಪ್ರಾಂಶುಪಾಲರು / ಆಡಳಿತ ಮಂಡಳಿಯು ವಿದ್ಯಾರ್ಥಿ / ಬೋಧಕ ವೃಂದವನ್ನು ಸೌಹಾರ್ದಯುತವಾಗಿ ಕಾಣತಕ್ಕದ್ದು.

9) ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರೆ ದಾಖಲಾತಿಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ತಾಂತ್ರಿಕ ಶಿಕ್ಷಣ ಇಲಾಖೆ / ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯು ಅನುಮೋದಿಸುವವರೆಗೆ ಅಥವಾ 6 ತಿಂಗಳ ಅವಧಿಗೆ ಮೀರಿ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದ್ದಲ್ಲ.

10) ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯು ವರ್ಗಾವಣೆ ಪ್ರಮಾಣ ಪತ್ರ ಬೇಕೆಂದು ಅಪೇಕ್ಷಿಸಿ ಅರ್ಜಿ ಸಲ್ಲಿಸಿದಲ್ಲಿ, ಅದನ್ನು ವಿತರಿಸುವಾಗ ವಿದ್ಯಾರ್ಥಿಗೆ ತೊಂದರೆ ನೀಡತಕ್ಕದ್ದಲ್ಲ; ಹಾಗೂ ಅವರಿಂದ ಬಾಕಿ ಉಳಿದಿರುವ ಶೈಕ್ಷಣಿಕ ವರ್ಷ / ಸೆಮಿಸ್ಟರ್ ಅವಧಿಗೆ ಮಾತ್ರ ಬೋಧಕ ಶುಲ್ಕವನ್ನು ಪಡೆಯತಕ್ಕದ್ದು ಹಾಗೂ ಬೇರೆ ಯಾವುದೇ ಮೊತ್ತವನ್ನು ಪಡೆಯತಕ್ಕದ್ದಲ್ಲ.

11) ಕ್ಯಾಪಿಟೇಷನ್ ಶುಲ್ಕವನ್ನು ಯಾವುದೇ ರೂಪದಲ್ಲೂ ಪಡೆಯತಕ್ಕದ್ದಲ್ಲ.

12) ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ನಾಗಭೂಷಣ್),
ಸರ್ಕಾರದ ಅಧೀನಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

ಗೆ,

01. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
02. ಕಾರ್ಯದರ್ಶಿಗಳು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು.
03. ನಿರ್ದೇಶಕರು, ಎಐಸಿಟಿಇ, ಎಸ್.ಡಬ್ಲ್ಯೂ.ಆರ್.ಓ. ಪ್ರಸನ್ನ ಕುಮಾರ್ ಬ್ಲಾಕ್, ಬೆಂಗಳೂರು. ವಿಶ್ವವಿದ್ಯಾನಿಲಯ ಆವರಣ, ಅರಮನೆ ರಸ್ತೆ, ಬೆಂಗಳೂರು-560 001.
04. ವಿವಿಧ ಖಾಸಗಿ ಹಾಗೂ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ (ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-ಇವರ ಮುಖಾಂತರ).
05. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿ.

**ಸರ್ಕಾರದ ಆದೇಶಸಂಖ್ಯೆ: ಇಡಿ 144 ಟಿಪಿಇ 2014.**
**ಬೆಂಗಳೂರು, ದಿನಾಂಕ: 30ನೇ ಜೂನ್ 2014.**

## ಅನುಬಂಧ

### ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ ಹೊಸ ಕೋರ್ಸುಗಳ ಪ್ರಾರಂಭ, 2ನೇ ಪಾಳಿಯ ಕೋರ್ಸುಗಳ ಪ್ರಾರಂಭ ಹಾಗೂ ವಿದ್ಯಾರ್ಥಿಪ್ರಮಾಣಗಳ ಹೆಚ್ಚಳದ ವಿವರ

**ಹೊಸ ಕೋರ್ಸುಗಳ ಪ್ರಾರಂಭ.**

| ಕ್ರಮ ಸಂಖ್ಯೆ | ಅನುದಾನಿತ ಪಾಲಿಟೆಕ್ನಿಕ್‌ನ ಹೆಸರು | ಹೊಸ ಕೋರ್ಸಿನ ವಿವರ | ವಿದ್ಯಾರ್ಥಿ ಪ್ರಮಾಣ |
|---|---|---|---|
| 1 | ಎಸ್‌ಟಿಜೆ ಪಾಲಿಟೆಕ್ನಿಕ್, ಹರಪನಹಳ್ಳಿ | 01. ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ | 60 |
| | | 02.ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 |

**ಅನುದಾನಿತ ಪಾಲಿಟೆಕ್ನಿಕ್‌ಗಳ ವಿದ್ಯಾರ್ಥಿಪ್ರಮಾಣಗಳ ಹೆಚ್ಚಳದ ವಿವರ**

| ಕ್ರಮ ಸಂಖ್ಯೆ | ಅನುದಾನಿತ ಪಾಲಿಟೆಕ್ನಿಕ್‌ನ ಹೆಸರು | ಕೋರ್ಸಿನ ಹೆಸರು | 2013-14ನೇ ಸಾಲಿನ ವಿದ್ಯಾರ್ಥಿ ಪ್ರಮಾಣ | 2014-15ನೇ ಸಾಲಿಗೆ ಕೋರಿರುವ ವಿದ್ಯಾರ್ಥಿ ಪ್ರಮಾಣ |
|---|---|---|---|---|
| 1 | ಮೋತಿಲಾಲ್ ಲಿಂಗಾಡೆ ಭರತೇಶ್ ಪಾಲಿಟೆಕ್ನಿಕ್, ಬೆಳಗಾಂ | ಸಿವಿಲ್ ಇಂಜಿನಿಯರಿಂಗ್ | 40 | 60 |

**ಅನುದಾನಿತ ಪಾಲಿಟೆಕ್ನಿಕ್‌ಗಳ 2ನೇ ಪಾಳಿಯ ಕೋರ್ಸುಗಳ ಪ್ರಾರಂಭ**

| ಕ್ರಮ ಸಂಖ್ಯೆ | ಅನುದಾನಿತ ಪಾಲಿಟೆಕ್ನಿಕ್‌ನ ಹೆಸರು | ಹೊಸ ಕೋರ್ಸಿನ ವಿವರ | ವಿದ್ಯಾರ್ಥಿ ಪ್ರಮಾಣ |
|---|---|---|---|
| 1 | ಇಂಪ್ಯಾಕ್ಟ್ ಪಾಲಿಟೆಕ್ನಿಕ್, ಕೊಡಿಗೆಹಳ್ಳಿ, ಬೆಂಗಳೂರು | 01. ಸಿವಿಲ್ ಇಂಜಿನಿಯರಿಂಗ್ | 60 |
| | | 02. ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 |
| 2 | ಬಿ.ವಿ.ವಿ.ಸಂಘ ಪಾಲಿಟೆಕ್ನಿಕ್, ಬಾಗಲಕೋಟೆ | 01 ಸಿವಿಲ್ ಇಂಜಿನಿಯರಿಂಗ್ | 60 |
| | | 02 ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 |

### ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ಹೊಸ ಕೋರ್ಸುಗಳ ಪ್ರಾರಂಭ, 2ನೇ ಪಾಳಿಯ ಕೋರ್ಸುಗಳ ಪ್ರಾರಂಭ ಹಾಗೂ ವಿದ್ಯಾರ್ಥಿಪ್ರಮಾಣಗಳ ಹೆಚ್ಚಳದ ವಿವರ

**ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ಹೊಸ ಕೋರ್ಸುಗಳ ಪ್ರಾರಂಭದ ವಿವರ.**

| ಕ್ರಮ ಸಂಖ್ಯೆ | ಖಾಸಗಿ ಪಾಲಿಟೆಕ್ನಿಕ್‌ನ ಹೆಸರು | ಹೊಸ ಕೋರ್ಸಿನ ವಿವರ | ವಿದ್ಯಾರ್ಥಿ ಪ್ರಮಾಣ |
|---|---|---|---|
| 01 | ಎಸ್‌ಡಿಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಪಾಲಿಟೆಕ್ನಿಕ್), ಉಜಿರೆ, ದಕ್ಷಿಣ ಕನ್ನಡ | ಸಿವಿಲ್ ಇಂಜಿನಿಯರಿಂಗ್ | 60 |

| | | | |
|---|---|---|---|
| 02 | ಬಾಲಾಜಿ ಪಾಲಿಟೆಕ್ನಿಕ್, ಗುಲ್ಬರ್ಗಾ. | ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 |
| 03 | ಅಶೋಕ ಪಾಲಿಟೆಕ್ನಿಕ್, ಕೆ.ಜಿ.ಹಳ್ಳಿ, ಬೆಂಗಳೂರು. | ಆಟೋಮೊಬೈಲ್ ಇಂಜಿನಿಯರಿಂಗ್ | 60 |
| 04 | ಬಿ.ಟಿ.ಎಲ್.ಪಾಲಿಟೆಕ್ನಿಕ್, ಬೊಮ್ಮಸಂದ್ರ, ಬೆಂಗಳೂರು. | ಸಿವಿಲ್ ಇಂಜಿನಿಯರಿಂಗ್ | 60 |

ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ವಿದ್ಯಾರ್ಥಿಪ್ರಮಾಣಗಳ ಹೆಚ್ಚಳದ ವಿವರ

| ಕ್ರಮ ಸಂಖ್ಯೆ | ಖಾಸಗಿ ಪಾಲಿಟೆಕ್ನಿಕ್‌ನ ಹೆಸರು | ಕೋರ್ಸಿನ ಹೆಸರು | 2013-14ನೇ ಸಾಲಿನ ವಿದ್ಯಾರ್ಥಿ ಪ್ರಮಾಣ | 2014-15ನೇ ಸಾಲಿಗೆ ಕೋರಿರುವ ವಿದ್ಯಾರ್ಥಿ ಪ್ರಮಾಣ |
|---|---|---|---|---|
| 1 | ಜೈನ್ ಪಾಲಿಟೆಕ್ನಿಕ್, ಬೆಳಗಾಂ | 1. ಸಿವಿಲ್ ಇಂಜಿನಿಯರಿಂಗ್ | 60 | 120 |
| | | 2. ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 | 120 |
| 2 | ಶೇಕ್ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಳಗಾಂ. | ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 | 120 |
| 3 | ವಿವೇಕಾನಂದ ಪಾಲಿಟೆಕ್ನಿಕ್, ಪುತ್ತೂರು | 1. ಆಟೋಮೊಬೈಲ್ ಇಂಜಿನಿಯರಿಂಗ್ | 40 | 60 |
| | | 2. ಸಿವಿಲ್ ಇಂಜಿನಿಯರಿಂಗ್ | 60 | 120 |

ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ವಿದ್ಯಾರ್ಥಿಪ್ರಮಾಣಗಳ ಹೆಚ್ಚಳದ ವಿವರ

| ಕ್ರಮ ಸಂಖ್ಯೆ | ಖಾಸಗಿ ಪಾಲಿಟೆಕ್ನಿಕ್‌ನ ಹೆಸರು | ಕೋರ್ಸಿನ ಹೆಸರು | 2013-14ನೇ ಸಾಲಿನ ವಿದ್ಯಾರ್ಥಿ ಪ್ರಮಾಣ | 2014-15ನೇ ಸಾಲಿಗೆ ಕೋರಿರುವ ವಿದ್ಯಾರ್ಥಿ ಪ್ರಮಾಣ |
|---|---|---|---|---|
| 4 | ಕರಾವಳಿ ಪಾಲಿಟೆಕ್ನಿಕ್, ಮಂಗಳೂರು | 1. ಆಟೋಮೊಬೈಲ್ ಇಂಜಿನಿಯರಿಂಗ್ | 60 | 120 |
| | | 2. ಮೆಕ್ಯಾನಿಕಲ್ ಇಂಜಿನಿಯರಿಂಗ್ | 90 | 120 |
| 5 | ಹೆಚ್.ಕೆ.ಇ ಸೊಸೈಟಿ ವುಮೆನ್ಸ್ ಪಾಲಿಟೆಕ್ನಿಕ್, ಗುಲ್ಬರ್ಗಾ. | ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ | 60 | 120 |
| 6 | ಹಾನಗಲ್ ಶ್ರೀ ಕುಮಾರಸ್ವಾಮಿ ಪಾಲಿಟೆಕ್ನಿಕ್, ಬಳ್ಳಾರಿ | 1. ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ | 60 | 120 |
| | | 2.ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 | 120 |
| 7 | ಮಲ್ಲಿಕ್ ಸಂಡಿಲ್ ಪಾಲಿಟೆಕ್ನಿಕ್, ಬಿಜಾಪುರ | 1. ಸಿವಿಲ್ ಇಂಜಿನಿಯರಿಂಗ್ | 120 | 180 |
| | | 2. ಮೆಕ್ಯಾನಿಕಲ್ ಇಂಜಿನಿಯರಿಂಗ್ | 120 | 180 |
| 8 | ಈಸ್ಟ್-ವೆಸ್ಟ್ ಪಾಲಿಟೆಕ್ನಿಕ್, ಬೆಂಗಳೂರು | 1. ಸಿವಿಲ್ ಇಂಜಿನಿಯರಿಂಗ್ | 120 | 180 |
| | | 2. ಮೆಕ್ಯಾನಿಕಲ್ ಇಂಜಿನಿಯರಿಂಗ್ | 120 | 180 |
| 9 | ಬಾಲಾಜಿ ಪಾಲಿಟೆಕ್ನಿಕ್, ಗುಲ್ಬರ್ಗಾ. | ಸಿವಿಲ್ ಇಂಜಿನಿಯರಿಂಗ್ | 60 | 120 |

| | | | | |
|---|---|---|---|---|
| 10 | ಅಶೋಕ ಪಾಲಿಟೆಕ್ನಿಕ್, ಕೆ.ಜಿ.ಹಳ್ಳಿ, ಬೆಂಗಳೂರು | ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 | 120 |
| 11 | ಹೆಚ್.ಎಂ.ಎಸ್. ರೂರಲ್ ಪಾಲಿಟೆಕ್ನಿಕ್, ತುಮಕೂರು | 1. ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ | 40 | 60 |
| | | 2. ಮೆಕ್ಯಾನಿಕಲ್ ಇಂಜಿನಿಯರಿಂಗ್ | 90 | 120 |
| 12 | ವಿದ್ಯಾವರ್ಧಕ ಸಂಘ ಪಾಲಿಟೆಕ್ನಿಕ್, ಮೈಸೂರು | ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 | 120 |
| 13 | ಎ.ಐ.ಟಿ. ಪಾಲಿಟೆಕ್ನಿಕ್, ಚಿಕ್ಕಮಗಳೂರು | 1. ಸಿವಿಲ್ ಇಂಜಿನಿಯರಿಂಗ್ | 40 | 60 |
| | | 2. ಮೆಕ್ಯಾನಿಕಲ್ ಇಂಜಿನಿಯರಿಂಗ್ | 40 | 60 |

**ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ 2ನೇ ಪಾಳಿಯ ಕೋರ್ಸ್‌ಗಳ ಪ್ರಾರಂಭ**

| ಕ್ರಮ ಸಂಖ್ಯೆ | ಖಾಸಗಿ ಪಾಲಿಟೆಕ್ನಿಕ್‌ನ ಹೆಸರು | ಹೊಸ ಕೋರ್ಸಿನ ವಿವರ | ವಿದ್ಯಾರ್ಥಿ ಪ್ರಮಾಣ |
|---|---|---|---|
| 1 | ಅಂಗಡಿ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ & ಮ್ಯಾನೇಜ್‌ಮೆಂಟ್, ಬೆಳಗಾಂ. | 1. ಕಂಪ್ಯೂಟರ್ ಸೈನ್ಸ್ | 60 |
| | | 2. ಎಲೆಕ್ಟ್ರಿಕಲ್ ಇಂಜಿನಿಯರಿಂಗ್ | 60 |
| 2 | ಎನ್.ಡಿ.ಆರ್.ಕೆ. ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಹಾಸನ. | 1. ಸಿವಿಲ್ ಇಂಜಿನಿಯರಿಂಗ್ | 60 |
| | | 2. ಕಂಪ್ಯೂಟರ್ ಸೈನ್ಸ್ | 60 |
| 3 | ರಾಜೀವ್ ಪಾಲಿಟೆಕ್ನಿಕ್, ಹಾಸನ. | ಸಿವಿಲ್ ಇಂಜಿನಿಯರಿಂಗ್ | 60 |
| 4 | ಶೇಕ್ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಳಗಾಂ. | ಇ & ಸಿ ಇಂಜಿನಿಯರಿಂಗ್ | 60 |

**2014-15ನೇ ಸಾಲಿಗೆ ಹೊಸ ಪಾಲಿಟೆಕ್ನಿಕ್ ಪ್ರಾರಂಭದ ವಿವರ,**

| ಕ್ರಮ ಸಂಖ್ಯೆ | ಖಾಸಗಿ ಪಾಲಿಟೆಕ್ನಿಕ್‌ನ ಹೆಸರು | ಹೊಸ ಕೋರ್ಸಿನ ವಿವರ | ವಿದ್ಯಾರ್ಥಿ ಪ್ರಮಾಣ |
|---|---|---|---|
| ❖ 01 | ಜೈನ್ ಪಾಲಿಟೆಕ್ನಿಕ್, ದಾವಣಗೆರೆ | 1. ಸಿವಿಲ್ ಇಂಜಿನಿಯರಿಂಗ್ | 60 |
| | | 2. ಕಂಪ್ಯೂಟರ್ ಸೈನ್ಸ್ ಇಂಜಿ. | 60 |
| | | 3. ಇ & ಸಿ ಇಂಜಿನಿಯರಿಂಗ್ | 60 |
| | | 4. ಇ & ಇ ಇಂಜಿನಿಯರಿಂಗ್ | 60 |
| | | 5. ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 |
| | ಒಟ್ಟು | | 300 |

(ಬಿ.ನಾಗಭೂಷಣ್),
ಸರ್ಕಾರದ ಅಧೀನಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

ಹಿಂಬರಹ ಸಂಖ್ಯೆ: ಡಿಟಿಇ 04 ಡಿವಿಪಿ(2) 2014 ದಿನಾಂಕ: 05/07/2014.

ಸರ್ಕಾರಿ ಆದೇಶದ ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಕೆಳಕಂಡ ಅಧಿಕಾರಿಗಳಿಗೆ ಹಾಗೂ ವಿಭಾಗಗಳಿಗೆ ಕಳುಹಿಸಲಾಗಿದೆ.

01. ರಾಜ್ಯದ ಸಂಬಂಧಪಟ್ಟ ಖಾಸಗಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ
02. ಸಹ ನಿರ್ದೇಶಕರು [ಆಡಳಿತ/ಪರೀಕ್ಷೆ/ತನಿಖೆ/ಸಿಡಿಸಿ]
03. ಉಪ ನಿರ್ದೇಶಕರು [ಯೋಜನೆ/ಪರೀಕ್ಷೆ/ಸಿಡಿಸಿ]
04. ಸಹಾಯಕ ನಿರ್ದೇಶಕರು [ಯೋಜನೆ/ಪರೀಕ್ಷೆ/ಎಂಪಿಸಿ]
05. ಸಂಖ್ಯಾಧಿಕಾರಿಗಳಿಗೆ
06. ರಿಜಿಸ್ಟ್ರಾರ್ – ಪರೀಕ್ಷೆ/ಎಸಿಎಂ
07. ಅಧೀಕ್ಷಕರು, ಪರೀಕ್ಷೆ/ಎಸಿಎಂ
08. ಪರೀಕ್ಷಾ ವಿಭಾಗದ ಆರ್‌ಡಿಎಂ ವಿಭಾಗಕ್ಕೆ
09. ಎಸಿಎಂ(2) ವಿಭಾಗಕ್ಕೆ
10. ಸರ್ಕಾರಿ ಆದೇಶಗಳ ಕಡತಕ್ಕೆ
11. ನಿರ್ದೇಶಕರ ಆಪ್ತಶಾಖೆಗೆ
12. ಕಛೇರಿ ಪ್ರತಿ.
13. ಪ್ರತಿಯನ್ನು ಸಂಬಂಧಪಟ್ಟ ಕಡತಗಳಿಗೆ
14. ನಿರ್ದೇಶನಾಲಯದ ಇ-ಗೌವರ್‌ನೆನ್ಸ್ ಸೆಲ್‌ಗೆ

(ಜಂಟಿ ನಿರ್ದೇಶಕರು [illegible]ಟಿಎಸ್)
[illegible]
5/7/2014 5/7/14 5/7/14